**ಓ ಎಸ್ ನಂಃ 28/2015**
**ಪಿ ಡಬ್ಲ್ಯೂ ಃ 2**

**ದಿಃ 03.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಲ್ ಎಸ್ ವಕೀಲರಿಂದ :-**

ನಾನು ಬೆರಳಚ್ಚುಗಾರ ವೃತ್ತಿಯನ್ನು ಮಾಡುತ್ತೇನೆ. ನಿಪಿ 1 ರ ಕ್ರಯದ ಕರಾರು ಪತ್ರವನ್ನು ಬೇರೆಯವರು ಬೆರಳಚ್ಚು ಮಾಡಿರುತ್ತಾರೆ. ನಿಪಿ 1 ಕ್ರಯದ ಕರಾರು ಪತ್ರಕ್ಕೆ ಸಿದ್ದರಾಜು ಹಾಗೂ ನಾನು ಸಹಿಯನ್ನು ಹಾಕಿರುತ್ತೇವೆ. ಸಿದ್ದರಾಜುರವರ ಮುಖಪರಿಚಯ ಇಲ್ಲ ಮತ್ತು ತಾವು ಅವರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ವಾದಿಯನ್ನು ತಾವು ಈ ಹಿಂದೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ತಾವು ಸಹಿಯನ್ನು ಹಾಕುವಾಗ ನಿಪಿ 1 ರ ದಾಖಲಾತಿಯಲ್ಲಿ ಬೇರೆಯವರ ಸಹಿ ಇದ್ದವ ಎಂದರೆ ಸಾಕ್ಷಿಯು ಇದ್ದವು ಎಂದು ನುಡಿಯುತ್ತಾರೆ. ನಿಪಿ 1 ದಾಖಲಾತಿಗೆ ಯಾರು ಮತ್ತು ಎಲ್ಲಿ ಹಾಕಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತು ಎಂದು ನುಡಿಯುತ್ತಾರೆ. ನಿಪಿ 1 ದಾಖಲಾತಿಗೆ ಸಹಿ ಮಾಡುವಂತೆ ನನ್ನನ್ನು ರೇಣುಕಾರಾಧ್ಯರವರ ಹೆಂಡತಿ ಶಾರದಮ್ಮ ರವರು ಕರೆಸಿರುತ್ತಾರೆ. ನಿಪಿ 1 ದಾಖಲಾತಿಗೆ ತಾವು ಸಹಿಯನ್ನು ಮಾಡುವ ಸಮಯದಲ್ಲಿ ಅಲ್ಲಿ ಯಾರು ಹಾಜರಿದ್ದರು ಎಂದರೆ ಸಾಕ್ಷಿ ಜಯಣ್ಣ, ರೇಣುಕಾರಾಧ್ಯ ಮತ್ತು ಸಿದ್ದರಾಜುರವರು ಹಾಜರಿರುತ್ತಾರೆ. ನಿಪಿ 1 ದಾಖಲಾತಿಯ ಒಕ್ಕಣೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿನ ಕ್ರಯದ ಮಾತುಕತೆ ಆಗುವ ಸಮಯದಲ್ಲಿ ನಾನು ಹಾಜರಿರುವುದಿಲ್ಲ. ತಮ್ಮ ಮುಂದೆ ವಾದಿಯು ಪ್ರತಿವಾದಿಗೆ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಗೆ ನಿಪಿ 1 ರ ಬಾಬ್ತು ನನ್ನ ಸಮಕ್ಷಮ ರೂ. 2 ಲಕ್ಷ ಹಣವನ್ನು 2000 ರೂಪಾಯಿಯ ಮುಖಬೆಲೆಯ ನೋಟುಗಳಲ್ಲಿ ಮುಂಗಡವಾಗಿ ನೀಡಿದ್ದರು. ನಿಪಿ 1 ಕ್ರಯದ ಕರಾರು ಪತ್ರಕ್ಕೆ ನಾನು 2 ಬಾರಿ ಸಹಿಗಳನ್ನು ಮಾಡಿರುತ್ತೇನೆ. ನಾನು ನಿಪಿ 1 ಕ್ಕೆ ಮೊದಲನೆಯದಾಗಿ 2012 ರಲ್ಲಿ ಸಹಿಗಳನ್ನು ಹಾಕಿರುತ್ತೇನೆ. ನಾನು ನಿಪಿ 1 ರ ದಾಖಲಾತಿಗೆ 2 ಸಹಿಗಳನ್ನು ಒಂದೇ ಸ್ಥಳದಲ್ಲಿ ಹಾಕಿರುತ್ತೇನೆ. ನಿಪಿ 1 ದಾಖಲಾತಿಗೆ ತಾವು 2 ನೇ ಬಾರಿ ಸಹಿ ಮಾಡುವಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಎಲ್ಲರೂ ಇದ್ದರು ಎಂದು ನುಡಿಯುತ್ತಾರೆ. ನಿಪಿ 1 ದಾಖಲಾತಿಗೆ ನಾನು ಸಹಿ ಮಾಡುವಾಗ ಯಾರು ಯಾರು ಹಾಜರಿದ್ದರು ಅವರೆಲ್ಲರೂ ಸಹ ನಿಪಿ 1 ಕ್ಕೆ ಷರಾ ಬರೆಯುವ ಸಂದರ್ಭದಲ್ಲಿ ಹಾಜರಿದ್ದರು. ನಿಪಿ 1 ರ ದಾಖಲಾತಿಯ ಒಕ್ಕಣೆಯನ್ನು ವಕೀಲರಾದ ಭೀಮರಾವ್ ರವರು ಟೈಪ್ ಮಾಡಿರುತ್ತಾರೆ. ನಿಪಿ 1 ರ ಮಾರಾಟಗಾರರು ಮತ್ತು ಖರೀದಿದಾರರು ನನಗೆ ಪರಿಚಯವಿರುತ್ತಾರೆ. ನಿಪಿ 1 ದಾಖಲಾತಿಗೆ

ಓ ಎಸ್ ನಂಃ 28/2015

ಪಿ ಡಬ್ಲ್ಯೂ ಃ 2

ತಾವು ತಮ್ಮ ಮನೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. 2 ನೇ ವಾದಿಯು ಪ್ರತಿವಾದಿಗೆ ರೂ. 5 ಲಕ್ಷ ಹಣವನ್ನು 500 ರೂ ಮತ್ತು 1000 ರೂಪಾಯಿ ಮುಖಬೆಲೆಯ ನೋಟುಗಳಲ್ಲಿ ನೀಡಿರುತ್ತಾರೆ. ವಾದಿಯು ಪ್ರತಿವಾದಿಗೆ ಕ್ರಯದ ಕರಾರು ಬಾಬ್ತು ರೂ. 5 ಲಕ್ಷ ಹಣವನ್ನು ಯಾವತ್ತೂ ನೀಡಿಲ್ಲ ಎಂದರೆ ಸರಿಯಲ್ಲ. ತಾವು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ತಾವು ನಿಪಿ 1 ರ ದಾಖಲಾತಿಗೆ ಸಹಿ ಮಾಡಿದ್ದೀರ ಎಂದರೆ ಸರಿಯಲ್ಲ. ನಿಪಿ 1 ಕ್ರಯದ ಕರಾರು ಪತ್ರಕ್ಕೂ ಮತ್ತು ಷರಾ ದ ನಡುವೆ 1 ವರ್ಷದ ಅಂತರ ಇದೆ. ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ತಾವು ನಿಪಿ 1 ರ ದಾಖಲಾತಿಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3(ಎ) ಪ್ರತಿವಾದಿ ಪರ ಶ್ರೀ ಸಿ ಕೆ ಆರ್ ವಕೀಲರಿಂದಃ-**

ಜಯಣ್ಣ ರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಜಯಣ್ಣ ರವರ ಹೆಂಡತಿಯಾದ ಸವಿತಾ ರವರು ನಿಪಿ 1 ರ ಕ್ರಯದ ಕರಾರು ಪತ್ರ ಮತ್ತು ಷರಾ ವನ್ನು ಬರೆಯುವ ಸಮಯದಲ್ಲಿ ಹಾಜರಿರಲಿಲ್ಲ ಎಂದರೆ ಸರಿ. ತಾವು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**